


### ಮಾಹಿತಿಪೂರ್ಣ ಲೇಖನ

ದೆಹಲಿಗೆ ನೂರು ವರ್ಷ ತುಂಬಿದ ಸಂದರ್ಭಕ್ಕೆ ಎಚ್. ಎನ್.ರಂಗರಾವ್ ಮುಖಪುಟ ಲೇಖನ ಹಾಗೂ ಎಸ್.ಪಿ. ವಿಜಯಲಕ್ಷ್ಮಿ ಅವರ 'ದೆಹಲಿಯ ಸ್ವಪ್ನ ಲೋಕ' ಚಿತ್ರ ಬರಹ ಮಾಹಿತಿಪೂರ್ಣವಾಗಿವೆ.

ರವೀಂದ್ರನಾಥ ಯಡಹಳ್ಳಿ, ಬೀಳಗಿ/ ಅಮೃತೇಶ ತಂಡರ, ಅಣ್ಣಿಗೇರಿ/ ಎಂ.ಎಲ್.ಲಕ್ಷ್ಮಣರಾವ್, ದಾವಣಗೆರೆ/ ಬಿ.ಎಸ್.ನಾರಾಯಣಸ್ವಾಮಿ, ಬೋಧನ ಹೊಸಹಳ್ಳಿ/ ಜಿ.ಸಿ.ರಾಜೇಶ, ಗಿರಿಮಲ್ಲನ ಪಾಳ್ಯ/ ಸು.ವಿಜಯಲಕ್ಷ್ಮಿ, ಶಿವಮೊಗ್ಗ

### ಪಯಣಕ್ಕೆ ಪ್ರೇರಣೆ!

ಇಂಡಿಯಾ ಗೇಟ್ ಅನ್ನು ಮುಖಪುಟದಲ್ಲಿ ಹೊತ್ತು, ಗಣರಾಜ್ಯದಿನದಂದೇ ಕೈಸೇರಿದ 'ದೆಹಲಿ ಸಂಚಿಕೆ'ಯಲ್ಲಿನ ಎರಡೂ ಲೇಖನಗಳು ಅದ್ಭುತವಾಗಿವೆ. ದೆಹಲಿಯನ್ನು ಇನ್ನೂ ನೋಡದ ನನ್ನಂತಹವರು ಪ್ರಯಾಣಕ್ಕೆ ಸಿದ್ಧರಾಗಲು ಈ ಸಂಚಿಕೆ ಪ್ರೇರೇಪಿಸಿದೆ!

-ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

### ಏನಿದು ಪಕ್ಷಪಾತ?

'ಏನಿದು ಪಾಲಿಸಿಸ್ಟಿಕ್... ಸಿಂಡ್ರೋಮ್' ಡಾ.ಸದಾನಂದ ಜಿಗಜಿನ್ನಿಯವರ ಬರಹದಲ್ಲಿ ದೀರ್ಘಾವಧಿ ಈ ರೋಗದ ಲಕ್ಷಣಗಳಿರುವವರು 'ಪಕ್ಷಪಾತ'ದಿಂದ ಕೂಡಾ ಬಳಲುತ್ತಾರೆ ಎಂದಿದೆ. ಏನಿದು ಪಕ್ಷಪಾತ ಕಾಯಿಲೆ? 'ಪಕ್ಷಪಾತ'ವೋ, 'ಪಕ್ಷವಾತ'ವೋ.

'ರೆಪ್ಪೆಗೂ ರಂಗು' ಅವನೀಶ್ ಬರಹದಲ್ಲಿ ಮಸ್ಕರಾದಲ್ಲಿ ಪಿಗ್ಮೆಂಟೇಶನ್ ಬಳಸುತ್ತಾರೆ ಎಂದಿದೆ. ಪಿಗ್ಮೆಂಟ್ (ವರ್ಣದ್ರವ್ಯ) ಎಂದು ಬರೆಯಬೇಕಿತ್ತು.

-ಡಾ. ಡಿ.ಎಸ್. ಸುಮುಖ, ಬೆಂಗಳೂರು

### ಪುರುಷ ಸೂಕ್ತದ ಉಪಮೆ

ವಿಚಾರ ಲಹರಿಯಲ್ಲಿ ವೈನತೇಯರು ರಾಷ್ಟ್ರಗೀತೆಯನ್ನು ತಮ್ಮದೇ ಆದ ದೃಷ್ಟಿಕೋನದಿಂದ ನೋಡಿರುವುದು ನನಗೆ ಮೆಚ್ಚುಗೆ ತಂದಿತು. ಅದರಲ್ಲೂ 'ಜನಗಣಮನ'ವನ್ನು ಪುರುಷ ಸೂತ್ರಕ್ಕೆ ಹೋಲಿಸಿರುವ ಉಪಮೆ ಬಹಳ ಇಷ್ಟವಾಯಿತು.

ಎಫ್.ಎಮ್. ನಂದಗಾವ್‌ರ ಕತೆ ಓದುತ್ತಿದ್ದರೆ ಅದು ಒಂದು ಕತೆ ಅನಿಸದೇ, ಸಂಶೋಧನಾ ಪ್ರಬಂಧದ ಅನುಭವ ನೀಡಿತು. ಬುದ್ಧ-ಕ್ರಿಸ್ತರ ನಡುವಿನ ಸಂಶೋಧನೆ ಕುತೂಹಲ ಮೂಡಿಸಿತು.

ಹನಿ ಅವರ ಸೆಲೆಬ್ರಿಟಿ ಅಂಕಣ ಚೆನ್ನಾಗಿ ಮೂಡಿಬರುತ್ತಿದೆ. ಇದರಲ್ಲಿ ದೇಶೀಯ ಪ್ರತಿಭೆಗಳನ್ನು ಪರಿಚಯ ಮಾಡುವ ಕೆಲಸ ನಡೆಯಲಿ.

-ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

### ಕುತೂಹಲ ಹುಟ್ಟಿಸಿದ ಕಥೆ

'ಬೇಗೂರಿನಲ್ಲೊಬ್ಬ ಛದ್ಮವೇಷದ ಬುದ್ಧ' ಸಂಶೋಧನೆ ಒಳಗೊಂಡಿರುವುದರಿಂದ ಕುತೂಹಲ ಮೂಡಿಸಿತು.

-ಎಚ್.ಆನಂದಕುಮಾರ್, ಚಿತ್ರದುರ್ಗ,
ಎಚ್.ಎಸ್.ವಿಶ್ವನಾಥ್, ಶಿವಮೊಗ್ಗ

### ಅಮೋಘ ವೀರರು!

ಲಿಮ್ಕಾ, ಗಿನ್ನಿಸ್ ದಾಖಲೆ ವೀರರನ್ನು ಸುಧಾ ಹೆಗಡೆಯವರು ಸ್ಮರಿಸಿದ್ದಾರೆ. ಈ ವೀರರ ಸಾಧನೆಗಳು ಅಮೋಘವಾಗಿವೆ.

-ಪಿ.ಎಸ್.ಶ್ರೀವತ್ಸ, ಬೆಂಗಳೂರು

### ದೇಶದ ದುರದೃಷ್ಟ

'ಸಾನಿಯಾ ಕಾಲ ಮುಗಿಯಿತಾ?' ಲೇಖನ ಓದಿದಾಗ, ಭವಿಷ್ಯದ ಕ್ರೀಡಾ ತಾರೆ ಇನ್ನಷ್ಟು ಪ್ರಜ್ವಲಿಸುವಂತೆ ಮಾಡುವಳು ಎಂಬ ಭರವಸೆ ಏಕೋ ಸುಳ್ಳಾಗುತ್ತದೆ ಎಂಬ ಅನಿಸಿಕೆ ಮೂಡಿ, ಇದು ದೇಶದ ದುರದೃಷ್ಟವೇನೋ ಎನಿಸಿತು.

-ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ

### ಕಣ್ಣನ್ ಮಾಮ ಸರಿ ನಿಲುವು

'ನೀವು ಕೇಳಿದಿರಿ?' ಅಂಕಣದ ಉತ್ತರಗಳು ಸಾಮಾನ್ಯವಾಗಿ 2-3 ವಾರ ಮೊದಲು ಬರೆಯಲ್ಪಟ್ಟಿರುತ್ತವೆ. 'ಒಗಟೊಗಟಾಗಿ ಮಾತನಾಡುವವರನ್ನು ಏನೆಂದು ಕರೆಯಬೇಕು?' ಎಂಬ ಪ್ರಶ್ನೆಗೆ, 'ಕಣ್ಣನ್ ಮಾಮ ಎಂದು ಕರೆಯಬೇಕು' ಎಂಬ ನನ್ನ ಉತ್ತರ ಅವರ ಪತ್ನಿಯ ನಿಧನದ ಸಮಯದಲ್ಲಿ ಬಂದದ್ದು ಕಾಕತಾಳೀಯ ಅಷ್ಟೆ. ಕಣ್ಣನ್ ಮಾಮ ಈ ಅಂಕಣದ ಮತ್ತು ನನ್ನ ಅಭಿಮಾನಿ ಹಿರಿಯರಲ್ಲಿ ಒಬ್ಬರು. ಪತ್ನಿ ವಿಯೋಗದ ರಾತ್ರಿ, ಮನೆಯಲ್ಲಿಯೇ ಕಣ್ಣನ್ ಮಾಮ ಒಂದು ಹರಟೆ ಕಾರ್ಯಕ್ರಮ ಏರ್ಪಡಿಸಿದ್ದರು. ಇದು ಸಾವಿನ ಕ್ಷಣದಲ್ಲಿಯೂ ಬದುಕಿನತ್ತ ಮುಖ ಮಾಡಿರುವ ಅವರ ಸಕರಾತ್ಮಕ ನಿಲುವನ್ನು ತೋರಿಸುತ್ತದೆ.

-ರಾಮ್, ಬೆಂಗಳೂರು

### ಸಂತಸ ನೀಡಿದ ಉತ್ತರ

ನೀವು ಕೇಳಿದಿರಿ ಅಂಕಣದಲ್ಲಿ ಪ್ರಶ್ನೆ: 'ಕನ್ನಡನಾಡಿನಲ್ಲಿ ಹುಟ್ಟಿದ್ದಕ್ಕೆ ನಿಮಗೆ ಸಂತೋಷವೇ, ದುಃಖವೇ?' ಎಂಬ ಪ್ರಶ್ನೆಗೆ, 'ಹುಟ್ಟಿದ್ದಕ್ಕೆ ಸಂತೋಷ, ಬೆಳೆದುದಕ್ಕೆ ದುಃಖ - ನಮ್ಮಲ್ಲಿ ಸಾಹಿತ್ಯ, ಕಲೆಗೆ ಮನ್ನಣೆ ಬಹಳ ಕಡಿಮೆ' ಎಂಬ ರಾಮ್ ಅವರ ಉತ್ತರ ಓದಿ ಸಂತಸಪಟ್ಟೆ.

-ಏಕನಾಥ್ ಬೊಂಗಾಳೆ, ಕಮ್ಮಟ್ಟಿ

### 80 ಪುಟವೂ ಸೊಗಸು

ಮೊದಲಿನಿಂದಲೂ ಕನ್ನಡದ ಎಲ್ಲ ವಾರಪತ್ರಿಕೆಗಳನ್ನೂ ಓದುತ್ತಿರುವವರಲ್ಲಿ ನಾನೂ ಒಬ್ಬ. ಇತರೆ ಪತ್ರಿಕೆಗಳಿಗೆ ಹೋಲಿಸಿದರೆ 'ಸುಧಾ'ದ ಒಂದು ಪ್ಲಸ್ ಪಾಯಿಂಟ್ ಏನೆಂದರೆ, ಎಲ್ಲಾ 80 ಪುಟಗಳನ್ನೂ ಓದುವುದೇ ಒಂದು ಸೊಗಸು.

-ಪಿ.ಎಸ್.ಎಸ್, ಬೆಂಗಳೂರು

### ಕುತೂಹಲಕಾರಿ ಕಾದಂಬರಿ

ಎಚ್.ಗಿರಿಜಮ್ಮ ಅವರ ಧಾರಾವಾಹಿ 'ಚಂದಮಾಮ' ಚೆನ್ನಾಗಿ ಮೂಡಿಬರುತ್ತಿದೆ. ಕಥೆಯ ಹೂರಣ ಮುಂದಿನ ವಾರ ಏನಿರಬಹುದು ಎಂಬ ಕುತೂಹಲವನ್ನು ಉಂಟು ಮಾಡುತ್ತಿದೆ.

-ಬಿ.ಎಸ್.ಮುಳ್ಳೂರ, ಹಲಗತ್ತಿ

### ವರ್ಧಮಾನ ಪ್ರಶಸ್ತಿಗೆ ಆಹ್ವಾನ

2006ರಲ್ಲಿ ಪ್ರಥಮಾವೃತ್ತಿಯಾಗಿ ಪ್ರಕಟವಾದ ಸಾಹಿತ್ಯದ ಯಾವುದೇ ಪ್ರಕಾರದ (ಕಾವ್ಯ, ಕಾದಂಬರಿ, ನಾಟಕ, ಸಣ್ಣಕತೆ, ವಿಮರ್ಶೆ ಇತ್ಯಾದಿ) ಸಾಹಿತ್ಯ ಕೃತಿಗಳನ್ನು ಮೂಡಬಿದ್ರೆಯ ವರ್ಧಮಾನ ಸಾಹಿತ್ಯ ಪ್ರಶಸ್ತಿಗೆ ಆಹ್ವಾನಿಸಲಾಗಿದೆ. ಈ ಪ್ರಶಸ್ತಿಯು ಹಿರಿಯ ಸಾಹಿತಿಗಳ ಕೃತಿಗೆ ಮೀಸಲಿದ್ದರೆ, ವರ್ಧಮಾನ ಉದಯೋನ್ಮುಖ ಸಾಹಿತ್ಯ ಪ್ರಶಸ್ತಿಯು ತಮ್ಮ ಮೊದಲನೆಯ, ಎರಡನೆಯ ಇಲ್ಲವೇ ಮೂರನೆಯ ಕೃತಿಯ ಮೂಲಕ ಮಹತ್ವದ್ದನ್ನು ಸಾಧಿಸಿದ ಹೊಸ ಪೀಳಿಗೆಯ ಸಾಹಿತಿಗಳಿಗೆ ಮೀಸಲು.

3 ಪ್ರತಿಗಳನ್ನು ಫೆ. 15ರ ಒಳಗಾಗಿ ಮುನಿರಾಜ ರೆಂಜಾಳ, ಸಹ ನಿರ್ದೇಶಕರು, ವರ್ಧಮಾನ ಸಾಹಿತ್ಯ ಪ್ರಶಸ್ತಿ ಪೀಠ, ಜೆ.ಜೆ. ಕಾಲೇಜು, ಮೂಡಬಿದ್ರೆ, ದಕ್ಷಿಣ ಕನ್ನಡ-574227 ಕಳಿಸಿಕೊಡಿ.
ವಿವರಕ್ಕೆ: 9449936232

